# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ, ಬೆಳಗಾವಿ

ಅಧಿಸೂಚನೆ ಸಂಖ್ಯೆ: ಬೆಜಿನ್ಯಾ/ಆಡಳಿತ/ನೇಮಕಾತಿ/**1 /2023,** ದಿನಾಂಕ: **02/02/2023**

ವಿಷಯ: ಶೀಘ್ರಲಿಪಿಗಾರರ, ಆದೇಶ ಜಾರೀಕಾರರ ಮತ್ತು ಸಿಪಾಯಿ ಹುದ್ದೆಗಳ ನೇರ ನೇಮಕಾತಿಯ ಬಗ್ಗೆ.

ಉಲ್ಲೇಖ:

1) ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ: DJA-II(LCA-II) 128/2012, ದಿನಾಂಕ: 27/01/2022.
2) ಈ ಕಛೇರಿ ಅಧಿಸೂಚನೆ ಸಂಖ್ಯೆ: ಬೆಜಿನ್ಯಾ/ಆಡಳಿತ/ನೇಮಕಾತಿ/ **1 / 2020,** ದಿನಾಂಕ: 06/01/2020 (28 ಶೀಘ್ರಲಿಪಿಗಾರರ ಹುದ್ದೆಗಳು).
3) ಈ ಕಛೇರಿ ಅಧಿಸೂಚನೆ ಸಂಖ್ಯೆ: ಬೆಜಿನ್ಯಾ/ಆಡಳಿತ/ನೇಮಕಾತಿ/1/2021, ದಿನಾಂಕ: 23/02/2021 (**31** ಸಿಪಾಯಿ ಹುದ್ದೆಗಳು).
4) ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ: **DJA-II 400/2021,** ದಿನಾಂಕ: **10/01/2023** ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸೆಹಿಮ 2022 ದಿನಾಂಕ: 28.12.2022.

*****

ಮೇಲ್ಕಂಡ ಉಲ್ಲೇಖಿತ(4)ರ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರವರ ಪತ್ರ ಹಾಗೂ ಸರ್ಕಾರಿ ಆದೇಶದಂತೆ, ಈ ಅಧಿಸೂಚನೆಯಡಿಯಲ್ಲಿ, ಬೆಳಗಾವಿ ಜಿಲ್ಲಾ ನ್ಯಾಯಾಂಗ ಘಟಕದಲ್ಲಿ ಖಾಲಿಯಿರುವ ಶೀಘ್ರಲಿಪಿಗಾರರು, ಆದೇಶ ಜಾರೀಕಾರರು ಮತ್ತು ಸಿಪಾಯಿ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖ(1)ರಂತೆ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಅನುಮತಿ ನೀಡಿದ್ದು ಹಾಗೂ ಉಲ್ಲೇಖ(2)ರಂತೆ ಈ ನ್ಯಾಯಾಲಯದ ಅಧಿಸೂಚನೆಯಲ್ಲಿ ತಿಳಿಸಿದಂತೆ 28 ಶೀಘ್ರಲಿಪಿಗಾರರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ Online ಮೂಲಕ ಅರ್ಜಿ ಅಹ್ವಾನಿಸಿದ್ದು, ಅದರಲ್ಲಿ ಕೇವಲ 13 ಅರ್ಹ ಅಭ್ಯರ್ಥಿಗಳು ಆಯ್ಕೆಯಾಗಿದ್ದು ಇನ್ನು ವಿವಿಧ ವರ್ಗೀಕರಣಗಳಡಿಯಲ್ಲಿ 15 ಹುದ್ದೆಗಳು ಭರ್ತಿಯಾಗದೇ ಖಾಲಿ ಉಳಿದಿದ್ದು, ಅವುಗಳನ್ನು ವಿವಿಧ ಮೀಸಲಾತಿ/ವರ್ಗೀಕರಣಗಳಡಿಯಲ್ಲಿ ಹಿಂಬಾಕಿ ಹುದ್ದೆಗಳೆಂದು ಪರಿಗಣಿಸಿ ಮತ್ತು ಉಲ್ಲೇಖ(3)ರಲ್ಲಿ ಈ ನ್ಯಾಯಾಲಯದ ಅಧಿಸೂಚನೆಯಂತೆ 31 ಸಿಪಾಯಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳು ಆಯ್ಕೆಯಾಗಿದ್ದು, ಇನ್ನು 01 ಹುದ್ದೆ ಭರ್ತಿಯಾಗದೇ ಖಾಲಿ ಇದ್ದು ಅದನ್ನು ಅದೇ ಮೀಸಲಾತಿ/ವರ್ಗೀಕರಣದಡಿಯಲ್ಲಿ ಹಿಂಬಾಕಿ ಹುದ್ದೆಯಂತಾ ಪರಿಗಣಿಸಿ, ಈ ಮೇಲಿನ

...2.

ಉಲ್ಲೇಖ(1), (2) ಮತ್ತು (3)ರಂತೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಜಾಗರೂಕತೆಯಿಂದ ಎಲ್ಲಾ ಅಂಕಣಗಳನ್ನು ತಪ್ಪಿ ಲ್ಲದಂತೆ ಭರ್ತಿಮಾಡಿ ಕೊನೆಯ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

ಅರ್ಜಿಗಳನ್ನು ಬೆಳಗಾವಿಯ ಜಿಲ್ಲಾ ನ್ಯಾಯಾಲಯದ ವೆಬ್-ಸೈಟ್ https://districts.ecourts.gov.in/belagavi-onlinerecruitment ನಲ್ಲಿ ನೀಡಲಾದ ಲಿಂಕ್ ಬಳಸಿ ಆನ್‌ಲೈನ್ ಮುಖಾಂತರ ದಿನಾಂಕಃ **02.02.2023** ರಿಂದ ದಿನಾಂಕಃ **03.03.2023** ರ ರಾತ್ರಿ **11.59** ರವರೆಗೆ ಮಾತ್ರ ಸಲ್ಲಿತಕ್ಕದ್ದು ಹಾಗೂ ಶುಲ್ಕವನ್ನು ಚಲನ್ ಮುಖಾಂತರ ಪಾವತಿಸಲು ದಿನಾಂಕಃ **07.03.2023** ಕೊನೆಯ ದಿನಾಂಕವಾಗಿದ್ದು, ನಿಗದಿತ ಅವಧಿಯೊಳಗೆ ಎಸ್.ಬಿ.ಐ.ನ ಯಾವುದೇ ಶಾಖೆಯ ವ್ಯವಹಾರದ ವೇಳೆಯಲ್ಲಿ ಪಾವತಿಸತಕ್ಕದ್ದು ಅಥವಾ ಆನ್‌ಲೈನ್‌ಮೂಲಕ ಪಾವತಿಸತಕ್ಕದ್ದು.

ವಿಶೇಷ ಸೂಚನೆಃ

1) ಅಭ್ಯರ್ಥಿಗಳು ವಿಳಂಬ ಮಾಡದೆ ಆನ್‌ಲೈನ್ ಅರ್ಜಿಗಳನ್ನು ಕೊನೆ ದಿನಾಂಕದವರೆಗೆ ಕಾಯದೆ ಬೇಗನೆ ಸಲ್ಲಿತಕ್ಕದ್ದು.
2) ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಯಾವುದಾದರೂ ತಂತ್ರಿಕ ತೊಂದರೆಗಳು ಕಂಡು ಬಂದರೆ ಈ ಕಛೇರಿಯ ಈ ಕೆಳಕಂಡ ಇಮೇಲ್ ಐಡಿಗೆ ತಮ್ಮ ದೂರುಗಳನ್ನು ಸಲ್ಲಿಸಿ ಬಗೆಹರಿಸಿಕೊಳ್ಳುವುದು.
   recruitment.pdjbgm@gmail.com

## I ಶೀಘ್ರಲಿಪಿಗಾರರು-ಗ್ರೇಡ-3 (Stenographers-Grade III)

i) ಹುದ್ದೆಗಳ ಸಂಖ್ಯೆಃ 18 (03ಹೊಸ + 15ಹಿಂಬಾಕಿ (ಒಟ್ಟು ಹದಿನೆಂಟು))

ii) ವೇತನ ಶ್ರೇಣಿಃ ರೂ. 27650-650-29600-750-32600-850-36000-950-39800-1100-46400-1250-52650 ಹಾಗೂ ವಿಶೇಷ ಭತ್ಯೆ ನೀಡಲಾಗುವುದು.

iii) ಹುದ್ದೆಗಳ ವರ್ಗೀಕರಣಃ

| | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ | ಯೋಜನಾ ನಿರಾಶ್ರಿತ | ಅಂಗವಿಕಲರು | ಮಾಜೀ ಸೈನಿಕರು | ಒಟ್ಟು |
|---|---|---|---|---|---|---|---|
| ಸಾಮಾನ್ಯ | -- | 02 | -- | -- | -- | -- | **02** |
| ಪ್ರವರ್ಗ-I | -- | -- | -- | -- | -- | -- | **--** |
| ಪ್ರವರ್ಗ-IIA | -- | 01 | 01 | -- | 01*** | -- | **03** |
| ಪ್ರವರ್ಗ-IIB | 01 | 01 | 01 | -- | 01* | -- | **04** |
| ಪ್ರವರ್ಗ-IIIA | - | 01 | 01 | -- | 01 | -- | **03** |
| ಪರಿಶಿಷ್ಟ ಜಾತಿ | -- | -- | 01 | -- | 01** | 01 | **03** |
| ಪರಿಶಿಷ್ಟ ಪಂಗಡ | -- | 01 | 01 | 01 | -- | -- | **03** |
| ಒಟ್ಟು | **01** | **06** | **05** | **01** | **04** | **01** | **18** |

*ಚಲನವಲನ ವೈಕಲ್ಯ ಹೊಂದಿದವರಿಗೆ (Locomotive Disorder)

**ಕುಷ್ಟರೋಗ ಮುಕ್ತರಾದವರಿಗೆ (Leprosy Cured Persons).

*** ದೃಷ್ಟಿಮಾಂಧ್ಯತೆಯುಳ್ಳವರಿಗೆ (Low vision)

**ಶೈಕ್ಷಣಿಕ ವಿದ್ಯಾರ್ಹತೆಃ**

1) ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಪದವಿ ಪೂರ್ವ ಶಿಕ್ಷಣ ಇಲಾಖೆ ನಡೆಸುವ ದ್ವಿತೀಯ ವರ್ಷದ ಪದವಿ ಪೂರ್ವ ಶಿಕ್ಷಣ ಕೋರ್ಸಿನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಕರ್ನಾಟಕ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಡಿಪ್ಲೋಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

2) ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಸುವ ಕನ್ನಡ ಹಾಗೂ ಆಂಗ್ಲ ಭಾಷೆಯ ಶೀಘ್ರಲಿಪಿಯಲ್ಲಿ ಹಿರಿಯ ದರ್ಜೆ (ಸಿನಿಯರ್ ಗ್ರೇಡ್) ಮತ್ತು ಕನ್ನಡ ಹಾಗೂ ಆಂಗ್ಲ ಭಾಷೆಯ ಬೆರಳಚ್ಚು ಹಿರಿಯ ದರ್ಜೆ (ಸಿನಿಯರ್ ಗ್ರೇಡ್) ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಕರ್ನಾಟಕ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಡಿಪ್ಲೋಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್ ಪದವಿಯೊಂದಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳ ಶೀಘ್ರಲಿಪಿ ಹಾಗೂ ಬೆರಳಚ್ಚು ವಿಷಯಗಳನ್ನು ಐಚ್ಛಿಕ ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

**ಅರ್ಹತಾ ಪರೀಕ್ಷೆಃ**

1) ಅಭ್ಯರ್ಥಿಗಳಿಗೆ ಕನ್ನಡ/ಇಂಗ್ಲೀಷ್ ಭಾಷೆಗಳಲ್ಲಿ ಪ್ರತಿ ನಿಮಿಷಕ್ಕೆ 120 ಪದಗಳ ವೇಗದಂತೆ 5 ನಿಮಿಷಗಳ ಉಕ್ತಲೇಖನ ನೀಡಿ ನಂತರ 45 ನಿಮಿಷಗಳ ಅವಧಿಯಲ್ಲಿ ಬೆರಳಚ್ಚು ಯಂತ್ರದ ಮೇಲೆ ಅಥವಾ ಗಣಕ ಯಂತ್ರದ ಮೆಲೆ ಲಿಪ್ಯಂತರ ಮಾಡಲು ಹೇಳಲಾಗುವುದು.

...4.

## II ಆದೇಶ ಜಾರೀಕಾರರು (Process-Server)

i) ಹುದ್ದೆಗಳ ಸಂಖ್ಯೆ: 06 (ಒಟ್ಟು ಆರು)

ii) ವೇತನ ಶ್ರೇಣಿ: ರೂ.19950-450-20400-500-22400-550-24600-600-27000-650-29600-750-32600-850-36000-950-37900 ಹಾಗೂ ಇತರ ಭತ್ಯೆಗಳು ನೀಡಲಾಗುವುದು.

iii) ಹುದ್ದೆಗಳ ವರ್ಗೀಕರಣ:

| | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ | ಯೋಜನಾ ನಿರಾಶ್ರಿತ | ಒಟ್ಟು |
|---|---|---|---|---|---|
| ಸಾಮಾನ್ಯ | -- | 01 | 01 | 01 | **03** |
| ಪ್ರವರ್ಗ-I | -- | -- | 01 | -- | **01** |
| ಪ್ರವರ್ಗ-IIA | 01 | -- | -- | -- | **01** |
| ಪರಿಶಿಷ್ಟ ಜಾತಿ | -- | -- | 01 | -- | **01** |
| ಒಟ್ಟು | **01** | **01** | **03** | **01** | **06** |

<u>ಶೈಕ್ಷಣಿಕ ವಿದ್ಯಾರ್ಹತೆ:</u>

1) ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

2) ಲಘು (LMV) ಹಾಗೂ ಭಾರಿ (Heavy Badge) ವಾಹನ ಚಾಲನಾ ಪರವಾಣಿಗೆ ಪತ್ರ ಹೊಂದಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

**ವಿಶೇಷ ಸೂಚನೆ:**

<u>*10 ನೇ ತರಗತಿಯ ಅಂಕಗಳು ಶ್ರೇಣಿಯಲ್ಲಿ ಅಥವಾ ಗ್ರೇಡದಲ್ಲಿದ್ದರೆ ಅದನ್ನು ಸಂಬಂಧಪಟ್ಟ ಶಾಲಾ ಮುಖ್ಯಸ್ಥರಿಂದ ಅಂಕಗಳಾಗಿ ಪರಿವರ್ತಿಸಿ ಗರಿಷ್ಠ ಅಂಕಗಳು, ಪಡೆದ ಅಂಕಗಳನ್ವಯ ಒಟ್ಟು ಶೇಕಡಾವಾರನ್ನು ಸರಿಯಾಗಿ 100 ರ ಪ್ರತಿಶತನಲ್ಲಿ ನಮೂದಿಸುವುದು ಅವುಗಳಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಅಂತಹ ಅರ್ಜಿಗಳನ್ನು ಯಾವುದೇ ಸೂಚನೆ ಇಲ್ಲದೇ ತಿರಸ್ಕರಿಸಲಾಗುವುದು.*</u>

…5.

*ಉದಾಹರಣೆಃ ಅಭ್ಯರ್ಥಿಯು ಸಿ.ಬಿ.ಎಸ್.ಸಿ. ಅಥವಾ ತತ್ಸಮಾನ ಶಿಕ್ಷಣದಲ್ಲಿ ಒಟ್ಟು 10ರ ಪೈಕಿ ಒಟ್ಟು 9 ಅಂಕಗಳನ್ನು ಪಡೆದಿದ್ದರೆ ಅದರ ಪ್ರತಿಶತ 100% ಕ್ಕೆ ತೆಗೆದು ಮತ್ತು ಅದೇ ರೀತಿ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಶಿಕ್ಷಣದಲ್ಲಿ ಪಡೆದ ಅಂಕಗಳು ಹಾಗೂ ಒಟ್ಟು ಅಂಕಗಳು ಮತ್ತು ಶೇಕಡಾ ಪ್ರತಿಶತವನ್ನು ಸಹ ಅರ್ಜಿಯನ್ನು ತುಂಬವಾಗ ಸರಿಯಾಗಿ ಶೇಕಡಾ ಹಾಗೂ ಪಡೆದ ಅಂಕಗಳನ್ನು ತಪ್ಪದೇ ನಮೂದಿಸಬೇಕು.*

*ಒಂದು ವೇಳೆ ಸರಿಯಾಗಿ ಪ್ರತಿಶತ ಶೇಕಡಾವಾರು ಮತ್ತು ಅಂಕಗಳನ್ನು ಸರಿಯಾಗಿ ನಮೂದಿಸದೆ ಇದ್ದರೆ ತಾವು ನಮೂದಿಸಿದ ಅಂಕಗಳನ್ನೇ ಅಂತಿಮ ಅಂಕಗಳೆಂದು ಪರಿಗಣಿಸಲಾಗುವುದು.*

## III ಸಿಪಾಯಿ (Peon)

i) ಹುದ್ದೆಗಳ ಸಂಖ್ಯೆಃ 44 (43+ 01ಹಿಂಬಾಕಿ (ಒಟ್ಟು ನಲವತ್ನಾಲ್ಕು))

ii) ವೇತನ ಶ್ರೇಣಿಃ ರೂಃ 17000-400-18600-450-20400-500-22400-550-24600-600-27000-650-28950 ಹಾಗೂ ಇತರ ಭತ್ಯೆಗಳು ನೀಡಲಾಗುವುದು.

iii) ಹುದ್ದೆಗಳ ವರ್ಗೀಕರಣಃ

| | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಅಂಗ ವಿಕಲರು | ಮಾಜೀ ಸೈನಿಕರು | ಒಟ್ಟು |
|---|---|---|---|---|---|---|---|---|
| ಸಾಮಾನ್ಯ | 3 | 8 | 4 | 1 | 1 | 1*+1** | 2 | **21** |
| ಪ್ರವರ್ಗ-I | -- | 1 | 1 | -- | -- | -- | -- | **02** |
| ಪ್ರವರ್ಗ-IIA | 2 | 1 | 1 | -- | 1 | -- | 1 | **06** |
| ಪ್ರವರ್ಗ-IIB | -- | 1 | 1 | -- | -- | -- | -- | **02** |
| ಪ್ರವರ್ಗ-IIIA | 1 | -- | -- | -- | -- | -- | -- | **01** |
| ಪ್ರವರ್ಗ-IIIB | 1 | -- | 1 | -- | -- | -- | -- | **02** |
| ಪರಿಶಿಷ್ಟ ಜಾತಿ | 2 | 2 | -- | -- | 1 | -- | 1 | **06** |
| ಪರಿಶಿಷ್ಟ ಪಂಗಡ | 1 | 1 | 1 | -- | -- | -- | 1 | **04** |
| ಒಟ್ಟು | **10** | **14** | **09** | **01** | **03** | **02** | **05** | **44** |

* ಚಲನವಲನ ವೈಕಲ್ಯ (Locomotor Disability).

* * ಕುಷ್ಠರೋಗ ಮುಕ್ತರಾದವರಿಗೆ (Leprosy Cured Persons).

**ಶೈಕ್ಷಣಿಕ ವಿದ್ಯಾರ್ಹತೆ:**

1) ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

2) ಅಭ್ಯರ್ಥಿಗೆ ಕನ್ನಡ ಓದಲು ಮತ್ತು ಬರೆಯಲು ತಿಳಿದಿರಬೇಕು.

**ವಿಶೇಷ ಸೂಚನೆ:**

*10 ನೇ ತರಗತಿಯ ಅಂಕಗಳು ಶ್ರೇಣಿಯಲ್ಲಿ ಅಥವಾ ಗ್ರೇಡದಲ್ಲಿದ್ದರೆ ಅದನ್ನು ಸಂಬಂಧಪಟ್ಟ ಶಾಲಾ ಮುಖ್ಯಸ್ಥರಿಂದ ಅಂಕಗಳಾಗಿ ಪರಿವರ್ತಿಸಿ ಗರಿಷ್ಠ ಅಂಕಗಳು, ಪಡೆದ ಅಂಕಗಳನ್ವಯ ಒಟ್ಟು ಶೇಕಡಾವಾರನ್ನು ಸರಿಯಾಗಿ 100 ರ ಪ್ರತಿಶತನಲ್ಲಿ ನಮೂದಿಸುವುದು ಅವುಗಳಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಅಂತಹ ಅರ್ಜಿಗಳನ್ನು ಯಾವುದೇ ಸೂಚನೆ ಇಲ್ಲದೇ ತಿರಸ್ಕರಿಸಲಾಗುವುದು.*

*ಉದಾಹರಣೆ: ಅಭ್ಯರ್ಥಿಯು ಸಿ.ಬಿ.ಎಸ್.ಸಿ. ಅಥವಾ ತತ್ಸಮಾನ ಶಿಕ್ಷಣದಲ್ಲಿ ಒಟ್ಟು 10 ರ ಪೈಕಿ ಒಟ್ಟು 9 ಅಂಕಗಳನ್ನು ಪಡೆದಿದ್ದರೆ ಅದರ ಪ್ರತಿಶತ 100% ಕ್ಕೆ ತೆಗೆದು ಮತ್ತು ಅದೇ ರೀತಿ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಶಿಕ್ಷಣದಲ್ಲಿ ಪಡೆದ ಅಂಕಗಳು ಹಾಗೂ ಒಟ್ಟು ಅಂಕಗಳು ಮತ್ತು ಶೇಕಡಾ ಪ್ರತಿಶತವನ್ನು ಸಹ ಅರ್ಜಿಯನ್ನು ತುಂಬವಾಗ ಸರಿಯಾಗಿ ಶೇಕಡಾ ಹಾಗೂ ಪಡೆದ ಅಂಕಗಳನ್ನು ತಪ್ಪದೇ ನಮೂದಿಸಬೇಕು.*

*ಒಂದು ವೇಳೆ ಸರಿಯಾಗಿ ಪ್ರತಿಶತ ಶೇಕಡಾವಾರು ಮತ್ತು ಅಂಕಗಳನ್ನು ಸರಿಯಾಗಿ ನಮೂದಿಸದೆ ಇದ್ದರೆ ತಾವು ನಮೂದಿಸಿದ ಅಂಕಗಳನ್ನೇ ಅಂತಿಮ ಅಂಕಗಳೆಂದು ಪರಿಗಣಿಸಲಾಗುವುದು.*

ನಿಗದಿತ ಅರ್ಜಿಶುಲ್ಕ:

| ವಿವಿಧ ವರ್ಗೀಕರಣ | ಶೀಘ್ರಲಿಗಾರರ ಹುದ್ದೆಗೆ | ಆದೇಶ ಜಾರೀಕಾರರ ಹುದ್ದೆಗೆ | ಸಿಪಾಯಿ ಹುದ್ದೆಗೆ |
|---|---|---|---|
| ಸಾಮಾನ್ಯ ವರ್ಗ, ಪ್ರವರ್ಗ IIA, IIB, IIIA, IIIB ಗೆ ಸೇರಿದ ಅಭ್ಯರ್ಥಿಗಳಿಗೆ. | ರೂ. 300/- ಅರ್ಜಿಶುಲ್ಕ ಪಾವತಿಸಬೇಕು. | ರೂ. 250/- ಅರ್ಜಿಶುಲ್ಕ ಪಾವತಿಸಬೇಕು. | ರೂ. 200/- ಅರ್ಜಿಶುಲ್ಕ ಪಾವತಿಸಬೇಕು. |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-I ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ. | ಶುಲ್ಕ ಪಾವತಿಯಿಂದ ವಿನಾಯಿತಿ ಇರುತ್ತದೆ. | ಶುಲ್ಕ ಪಾವತಿಯಿಂದ ವಿನಾಯಿತಿ ಇರುತ್ತದೆ. | ಶುಲ್ಕ ಪಾವತಿಯಿಂದ ವಿನಾಯಿತಿ ಇರುತ್ತದೆ. |

ಅರ್ಜಿಶುಲ್ಕ ಪಾವತಿಸಬೇಕಾದ ವಿಧಾನಃ

ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಈ ಕೆಳಕಂಡ ವಿಧಾನದ ಮುಖಾಂತರ ಮಾತ್ರ ಪಾವತಿ ಮಾಡತಕ್ಕದ್ದುಃ-

ಅ) ನ್ಯಾಯಾಲಯದ ವೆಬ್‌ಸೈಟ್https://districts.ecourts.gov.in/belagavi or www.districts.ecourts.gov.in/belagavi/online-recruitment ರಲ್ಲಿ ನೀಡಲಾದ ಲಿಂಕ್ ಮುಖಾಂತರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ State Bank Collect ಮೂಲಕ Online Payment through net banking/credit card/debit card/challan download ಸೌಲಭ್ಯದ ಮೂಲಕ Prl. District & Sessions Judge, Belagavi ರವರ ಹೆಸರಿಗೆ ಪಾವತಿಸತಕ್ಕದ್ದು.

ಅಥವಾ

ಆ) ಆನ್‌ಲೈನ್ ಮೂಲಕ ಮೇಲ್ಕಂಡ ವಿಧಾನದಲ್ಲಿ ಶುಲ್ಕವನ್ನು ಪಾವತಿ ಮಾಡಲಾಗದೇ ಇದ್ದಲ್ಲಿ ಅಭ್ಯರ್ಥಿಗಳು ಚಲನ್ ಪ್ರತಿಯನ್ನು ಅಧಿಕೃತ ವೆಬ್-ಸೈಟ್‌ನಿಂದ ಡೌನ್‌ಲೋಡ ಮಾಡಿಕೊಂಡು ಅದರ ಪ್ರಿಂಟ್‌ಔಟ್‌ನ್ನು ಪಡೆದುಕೊಂಡು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(State Bank of India)ದ ಯಾವುದೇ ಶಾಖೆಗೆ ಹಾಜರುಪಡಿಸಿ ಶುಲ್ಕವನ್ನು ಪಾವತಿಸತಕ್ಕದ್ದು.

ಈ ಮೇಲಿನ ವಿಧಾನಗಳನ್ನು ಹೊರತು ಪಡಿಸಿ ಯಾವುದೇ ಡಿಮಾಂಡ್ ಡ್ರಾಫ್ಟ್ ಪೋಸ್ಟಲ್ ಆರ್ಡರ್, ನಗದು, ಮನಿ ಆರ್ಡರ್, ಇವುಗಳ ರೂಪದಲ್ಲಿ ಶುಲ್ಕವನ್ನು ಸ್ವೀಕರಿಸಲಾಗುವುದಿಲ್ಲ.

ಎಲ್ಲ ಹುದ್ದೆಗಳಿಗಾಗಿ ಸಾಮಾನ್ಯ ನಿಯಮಗಳುಃ

1) ಆಯ್ಕೆಯಾದ ಅಭ್ಯರ್ಥಿಗಳನ್ನು ಕರ್ನಾಟಕ ಸೇವಾ ನಿಯಮ (ಪರಿವೀಕ್ಷಣಾ ನಿಯಮ 1997 ರ ಪ್ರಕಾರ 2 ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯಲ್ಲಿರುತ್ತಾರೆ. ಈ ಅವಧಿಯಲ್ಲಿ ಅಭ್ಯರ್ಥಿಗಳು ಅವರುಗಳ ಹುದ್ದೆಗೆ ನಿಗದಿಪಡಿಸಿರುವ ಇಲಾಖಾ ಪರೀಕ್ಷೆಗಳಲ್ಲಿ, ಕನ್ನಡ ಭಾಷೆಯಲ್ಲಿ ಮತ್ತು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು.
2) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕನಿಷ್ಠ 18 ವರ್ಷ ಪೂರೈಸಿರತಕ್ಕದ್ದು ಹಾಗೂ ಗರಿಷ್ಠ ವಯೋಮಿತಿ 03.03.2023 ರಂದು.
   ಅ) ಸಾಮಾನ್ಯ ವರ್ಗಃ 35 ವರ್ಷಗಳು.
   ಬ) ಪ್ರವರ್ಗ-IIA, IIB, IIIA, IIIB: 38 ವರ್ಷಗಳು.
   ಕ) ಪರಿಶಿಷ್ಟಜಾತಿ, ಪರಿಶಿಷ್ಟಪಂಗಡ, ಪ್ರವರ್ಗ-I:40 ವರ್ಷಗಳನ್ನು ಮೀರಬಾರದು.
3) ಸರ್ಕಾರಿ ಸೇವೆಯಲ್ಲಿರುವವರಿಗೆ, ವಿಧವೆಯರಿಗೆ, ಮಾಜೀ ಸೈನಿಕರಿಗೆ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು. ಈ ಬಗ್ಗೆ ಮೀಸಲಾತಿ ಕೋರಿದಲ್ಲಿ ನಿಗದಿತ ನಮೂನೆಯಲ್ಲಿ ಪ್ರಮಾಣಪತ್ರ ಪಡೆದಿರಬೇಕು ಹಾಗೂ ಅದನ್ನು ಅರ್ಜಿ ತುಂಬುವ ಸಮಯದಲ್ಲಿ ತಪ್ಪದೇ ಅಪಲೋಡ ಮಾಡಬೇಕು.
4) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣಪತ್ರ/ವರ್ಗಾವಣೆ ಪ್ರಮಾಣ ಪತ್ರ/ಜನನ ದಿನಾಂಕ ತೋರಿಸುವ ದಾಖಲೆಯ ಉದ್ಧೃತ ಭಾಗದ ಪ್ರತಿ ಸಲ್ಲಿಸಬೇಕು.

**…8.**

5) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ I,IIA,IIB,IIIA,IIIB ಗಳ ಮೀಸಲಾತಿ ಪ್ರಮಾಣ ಪತ್ರಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ ನಿಗದಿತ ನಮೂನೆಯಲ್ಲಿ (ಮೀಸಲಾತಿ ಕೋರಿದಲ್ಲಿ) ಪಡೆದಿರಬೇಕು ಹಾಗೂ ಅದನ್ನು ಅರ್ಜಿ ತುಂಬುವ ಸಮಯದಲ್ಲಿ ತಪ್ಪದೇ ಅಪಲೋಡ ಮಾಡಬೇಕು.

6) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಿಗದಿತ ನಮೂನೆಯಲ್ಲಿ (ಮೀಸಲಾತಿ ಕೋರಿದಲ್ಲಿ) ಪಡೆದಿರಬೇಕು ಹಾಗೂ ಅದನ್ನು ಅರ್ಜಿ ತುಂಬುವ ಸಮಯದಲ್ಲಿ ತಪ್ಪದೇ ಅಪಲೋಡ ಮಾಡಬೇಕು.

7) ಶಾಲಾ/ಕಾಲೇಜಿನ ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರಿಂದ ಪಡೆದ ನಡತೆ ಪ್ರಮಾಣಪತ್ರ ಹಾಗೂ ಸ್ಥಳೀಯ ಒಬ್ಬರು ಗಣ್ಯ ವ್ಯಕ್ತಿಯಿಂದ ಪಡೆದ 6 ತಿಂಗಳ ಇತ್ತೀಚಿನ ಒಂದು ನಡತೆ ಪ್ರಮಾಣಪತ್ರ ಪಡೆದಿರಬೇಕು ಹಾಗೂ ಅದನ್ನು ಅರ್ಜಿ ತುಂಬುವ ಸಮಯದಲ್ಲಿ ತಪ್ಪದೇ ಅಪಲೋಡ ಮಾಡಬೇಕು.

8) ಸೇವಾ ನಿರತ ಅಭ್ಯರ್ಥಿಗಳು ಅರ್ಜಿಗಳ ಸ್ವೀಕೃತಿಗಾಗಿ ನಿಗದಿಪಡಿಸಲಾದ ದಿನಾಂಕ ಹಾಗೂ ಸಮಯವನ್ನು ಮೀರದಂತೆ ತಮ್ಮ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಮತ್ತು ಸಂಬಂಧಪಟ್ಟ ಪ್ರಾಧಿಕಾರದಿಂದ ನೀಡಲಾದ "ನಿರಕ್ಷೇಪಣಾ ಪ್ರಮಾಣಪತ್ರವನ್ನು" (ಮೀಸಲಾತಿ ಕೋರಿದಲ್ಲಿ) ಪಡೆದಿರಬೇಕು ಹಾಗೂ ಅದನ್ನು ಅರ್ಜಿ ತುಂಬುವ ಸಮಯದಲ್ಲಿ ತಪ್ಪದೇ ಅಪಲೋಡ ಮಾಡಬೇಕು.

9) ವಿವಿಧ ಮೀಸಲಾತಿ ಅಡಿಯಲ್ಲಿ ಮೀಸಲಾತಿಯನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಿಗಳು ನೀಡಿದ ನಿಗದಿತ ನಮೂನೆಯಲ್ಲಿಯ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು, ಗ್ರಾಮೀಣ ವರ್ಗದ ಅಡಿಯಲ್ಲಿ ಮೀಸಲಾತಿಯ ಕ್ಲೇಮು ಮಾಡುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ಕೆನೆಪದರ ಪ್ರಮಾಣಪತ್ರವನ್ನು (Creamy Layer Certificate) (ಮೀಸಲಾತಿ ಕೋರಿದಲ್ಲಿ) ಪಡೆದಿರಬೇಕು ಹಾಗೂ ಅದನ್ನು ಅರ್ಜಿ ತುಂಬುವ ಸಮಯದಲ್ಲಿ ತಪ್ಪದೇ ಅಪಲೋಡ ಮಾಡಬೇಕು.

10) ಮೇಲ್ಕಂಡ ಪ್ರಯೋಜನಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ ಸಕ್ಷಮ ಪ್ರಾಧಿಕಾರಿಗಳು ನೀಡಿದ ಸಂಬಂಧಪಟ್ಟ ಪ್ರಮಾಣಪತ್ರಗಳನ್ನು (ಮೀಸಲಾತಿ ಕೋರಿದಲ್ಲಿ) ಪಡೆದಿರಬೇಕು ಹಾಗೂ ಅದನ್ನು ಅರ್ಜಿ ತುಂಬುವ ಸಮಯದಲ್ಲಿ ತಪ್ಪದೇ ಅಪಲೋಡ ಮಾಡಬೇಕು.

11) ವಿಕಲಚೇತನರು/ಮಾಜಿ ಸೈನಿಕರು/ವಿಧವೆಯರು ಸಕ್ಷಮ ಪ್ರಾಧಿಕಾರಿಗಳು ನೀಡಿದ ನಿಗದಿತ ನಮೂನೆಯಲ್ಲಿಯ ಪ್ರಮಾಣಪತ್ರಗಳನ್ನು (ಮೀಸಲಾತಿ ಕೋರಿದಲ್ಲಿ) ಪಡೆದಿರಬೇಕು ಹಾಗೂ ಅದನ್ನು ಅರ್ಜಿ ತುಂಬುವ ಸಮಯದಲ್ಲಿ ತಪ್ಪದೇ ಅಪಲೋಡ ಮಾಡಬೇಕು.

12) ದಾಖಲೇಗಳ ಪರಿಶೀಲನೆ ಮತ್ತು ಮೌಖಿಕ ಪರೀಕ್ಷೆಯ ಸಮಯದಲ್ಲಿ ಕರೆಯಲ್ಪಡುವ ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ವಿದ್ಯಾರ್ಹತೆ, ಜನ್ಮ ದಿನಾಂಕವನ್ನು ತೋರಿಸಲು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ,, ಜಾತಿ ಪ್ರಮಾಣ ಪತ್ರ, ಇವುಗಳಿಗೆ ಸಂಬಂಧಿಸಿದಂತೆ ಅಗತ್ಯ ಮೂಲದಾಖಲೆಗಳನ್ನು ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು, ಪರಿಶೀಲನೆ ಮಾಡುವಾಗ ಅರ್ಜಿದಾರರು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳೆಂದು ಕಂಡುಬಂದಲ್ಲಿ, ಆಗ ಅವರ ಅಭ್ಯರ್ಥಿಕೆಯು ತಿರಸ್ಕೃತವಾಗುತ್ತದೆ ಹಾಗೂ ಅವರು ಸುಳ್ಳು ಮಾಹಿತಿ ನೀಡಿದ್ದಕ್ಕಾಗಿ ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೂ ಸಹ ಗುರಿಯಾಗಬೇಕಾಗುತ್ತದೆ.

**…9.**

13) ಅಭ್ಯರ್ಥಿಯು ನೇಮಕಾತಿ ಸಂಬಂಧದಲ್ಲಿ ಯಾವುದೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವುದು ಕಂಡುಬಂದಲ್ಲಿ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

14) ಶೀಘ್ರಲಿಪಿಗಾರರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು ಆಯ್ಕೆಯಾದ ಮೂರು ತಿಂಗಳ ಒಳಗೆ ಸರ್ಕಾರವು ಅನುಮೋದಿಸಿದ ಏಜೆನ್ಸಿಯಲ್ಲಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ನಿಗದಿತ ಶೇಕಡಾ ಅಂಕಗಳಿಗೆ ಕಡಿಮೆ ಇಲ್ಲದಂತೆ ಪಡೆದು ಉತ್ತೀರ್ಣರಾಗತಕ್ಕದ್ದು.

15) ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿ ಆಯ್ಕೆಯಾಗುವ ಅಭ್ಯರ್ಥಿಗಳನ್ನು ಯಾವುದೇ ಸಮಯದಲ್ಲಾದರೂ ವಜಾ ಮಾಡಲಾಗುತ್ತದೆ ಹಾಗೂ ಕಾನೂನು ಕ್ರಮ ಜರುಗಿಸಲಾಗುವುದು.

<u>ಅಭ್ಯರ್ಥಿಗಳು ಆನ್‌ಲೈನ್ **(On-line)** ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು:</u>

1) ಅಭ್ಯರ್ಥಿಯು ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಮೊದಲು ಕೊಟ್ಟಿರುವ ಎಲ್ಲಾ ಸೂಚನೆಗಳನ್ನು ಗಮನವಿಟ್ಟು ಓದಿಕೊಳ್ಳಬೇಕು ಮತ್ತು ತಪ್ಪಾಗದಂತೆ ನೋಡಿಕೊಳ್ಳುವುದು, ಸರಿಯಾದ ಮಾಹಿತಿ ನೀಡದೇ ಇರುವ ಮತ್ತು ಅಪೂರ್ಣ ಮಾಹಿತಿಯುಳ್ಳ ಅರ್ಜಿಯನ್ನು/ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.

2) ಒಬ್ಬ ಅಭ್ಯರ್ಥಿಯು ಒಂದು ಹುದ್ದೆಗೆ ಎಲ್ಲ ಮಾಹಿತಿಯನ್ವಯ ಒಂದೇ ಸಲ್ಲ ಅರ್ಜಿಯನ್ನು ಸಲ್ಲಿಸುವುದು, ಒಂದು ವೇಳೆ ಒಂದಕ್ಕಿಂತ ಹೆಚ್ಚು ಅರ್ಜಿ ಸಲ್ಲಿಸಿದ್ದಲ್ಲಿ ಅಂತಿಮ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುವುದು ಮತ್ತು ಇನ್ನೂಳಿದ ಅಂದರೆ ಮುಂಚೆ ತುಂಬಿದ ಅರ್ಜಿಯನ್ನು/ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.

3) ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆಯನ್ನು ಹಾಗೂ ಇ-ಮೇಲ್ ಐಡಿಯನ್ನು ಕಡ್ಡಾಯವಾಗಿ ನಮೂದಿಸುವುದು, ಒಂದು ವೇಳೆ ತಾಂತ್ರೀಕ ತೊಂದರೆಯಿಂದ ಎಸ್.ಎಂ.ಎಸ್. ಅಥವಾ ಇಮೇಲ್ ಮುಖಾಂತರ ಅಭ್ಯರ್ಥಿಗಳಿಗೆ ಸಂದೇಶ ತಲುಪದಿದ್ದಲ್ಲಿ ಈ ಪ್ರಾಧಿಕಾರವು ಹೊಣೆಯಾಗುವುದಿಲ್ಲ ಮತ್ತು ಅಭ್ಯರ್ಥಿಗಳು ಕಛೇರಿಯ ಅಧಿಕೃತ ವೆಬ್‌ಸೈಟ್‌ನ್ನು ಕಾಲ-ಕಾಲಕ್ಕೆ ನೋಡುವುದು.

4) ಅಭ್ಯರ್ಥಿಯು ಭಾವಚಿತ್ರ ಮತ್ತು ಸಹಿಯನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಲು ಈ ಕೆಳಕಂಡ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

ಅ) ಬಣ್ಣದ ಭಾವಚಿತ್ರವು ಇತ್ತೀಚಿನದ್ದಾಗಿದ್ದು ಅಳತೆಯಲ್ಲಿ 5 cm ಉದ್ದ x 3.6 cm ಅಗಲವುಳ್ಳದ್ದಾಗಿರಬೇಕು ಹಾಗೂ ಅದು .jpg ನಮೂನೆಯಲ್ಲಿರಬೇಕು, ಭಾವಚಿತ್ರದ ಹಿಂಬದಿಯು ಬಿಳಿ ಬಣ್ಣದ್ದಾಗಿರಬೇಕು.

ಬ) ಭಾವಚಿತ್ರವನ್ನು ಸ್ಕ್ಯಾನ್ ಮಾಡಿ ಅರ್ಜಿಗೆ ಅಪ್‌ಲೋಡ್ ಮಾಡಬೇಕು (ಯಾವುದೇ ಕಾರಣಕ್ಕೂ ಭಾವಚಿತ್ರದ ಮೇಲೆ ಸಹಿ ಮಾಡಬಾರದು).

…10.

ಈ) ಅಭ್ಯರ್ಥಿಯು ಕಪ್ಪು ಬಾಲ್-ಪಾಯಿಂಟ್ ಪೆನ್ನಿನಲ್ಲಿ ಬಿಳಿ ಹಾಳೆಯ ಮೇಲೆ ಸಹಿ ಮಾಡಿ (2.5 cm ಉದ್ದ x 7.5 cm ಅಗಲವುಳ್ಳದ್ದಾಗಿರಬೇಕು ಮತ್ತು ಅಳತೆಯದ್ದಾಗಿರಬೇಕು, 25kb ಅಳತೆಯದ್ದಾಗಿರಬೇಕು ಹಾಗೂ ಅದು .jpg ನಮೂನೆಯಲ್ಲಿರಬೇಕು) ಅಪಲೋಡ್ ಮಾಡಬೇಕು.

5) ತದನಂತರ ಅಭ್ಯರ್ಥಿಯು On-line ಅರ್ಜಿಯಲ್ಲಿ ಕೋರಲಾದ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡಿ ನಿಗದಿತ ಶುಲ್ಕ ಪಾವತಿಸಲು ಅರ್ಜಿಯಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳುವುದು. ತದನಂತರ ಅರ್ಜಿಯನ್ನು ಹಾಗೂ ಶುಲ್ಕವನ್ನು ತುಂಬಿದ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ತಮ್ಮ ಹತ್ತಿರ ಇಟ್ಟುಕೊಳ್ಳತಕ್ಕದ್ದು ಹಾಗೂ ಅರ್ಹತಾ ಪರೀಕ್ಷೆ/ಸಂದರ್ಶನದ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

6) ನ್ಯಾಯಾಲಯದ ಅಧಿಕೃತ ವೆಬ್-ಸೈಟ್‌ನಲ್ಲಿ ಅರ್ಜಿಯನ್ನು ಆನ್‌ಲೈನ್ ಮೂಲಕ ನೊಂದಾಯಿಸಲು ದಿನಾಂಕಃ 03.03.2023 ರ ರಾತ್ರಿ 11.59 ರವರೆಗೆ ಅವಕಾಶವಿರುತ್ತದೆ. ಶುಲ್ಕವನ್ನು ಚಲನ್ ಮುಖಾಂತರ ಪಾವತಿಸಲು ದಿನಾಂಕಃ 07.03.2023 ಕೊನೆಯ ದಿನಾಂಕವಾಗಿದ್ದು ಅದರೊಳಗೆ ಎಸ್.ಬಿ.ಐ.ನ ಯಾವುದೇ ಶಾಖೆಯ ವ್ಯವಹಾರದ ವೇಳೆಯಲ್ಲಿ ಪಾವತಿಸತಕ್ಕದ್ದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ.

7) ಅರ್ಹ ಅಭ್ಯರ್ಥಿಗಳಿಗೆ SMS ಮತ್ತು E-mail ಮುಖಾಂತರ ಮಾತ್ರ ಮಾಹಿತಿ ನೀಡಲಾಗುವುದು. ಪ್ರಾಯೋಗಿಕ ಪರೀಕ್ಷೆ/ಸಂದರ್ಶನಕ್ಕೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಈ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಸದರಿ ಪಟ್ಟಿಯ ಆಧಾರದ ಮೇಲೆ ಅಭ್ಯರ್ಥಿಗಳನ್ನು ಪ್ರಾಯೋಗಿಕ ಪರೀಕ್ಷೆ/ಸಂದರ್ಶನಕ್ಕೆ ಕಡೆಯಲಾಗುವುದು.

8) ಆನ್‌ಲೈನ್ ಹೊರತುಪಡಿಸಿ ಇತರೆ ಯಾವುದೇ ವಿಧಾನದಲ್ಲಿ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

ಇತರೆ ಸೂಚನೆಗಳುಃ

1) ಶೀಘ್ರಲಿಪಿಗಾರರ ಹುದ್ದೆಗೆ ನಡೆಸುವ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣಹೊಂದಿದ ಅಭ್ಯರ್ಥಿಗಳ ಹಾಗೂ ಅವರ ನಿಗದಿ ಪಡಿಸಿದ ಶೈಕ್ಷಣಿಕ ಪರೀಕ್ಷೆಗಳ ಅಂಕಗಳ ಒಟ್ಟು ಸರಾಸರಿ ಆಧಾರದ ಮೇಲೆ ಮೆರಿಟ್‌ವೈಸ್ (**Merit wise**) 1:5 ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಸಂದರ್ಶನಕ್ಕೆ ಹಾಜರಾಗಬೇಕು ಹಾಗೂ ಸಂದರ್ಶನ ಪತ್ರ ಅಥವಾ **SMS** ಮತ್ತು **E-mail** ಬರದೇ ಇರುವ ಅಭ್ಯರ್ಥಿಗಳು ಸಂದರ್ಶನಕ್ಕೆ ಅನರ್ಹರೆಂದು ಭಾವಿಸತಕ್ಕದ್ದು.

**...11.**

2) ಆದೇಶ ಜಾರೀಕಾರರ ಹುದ್ದೆಗೆ 1 : 25 ರ ಅನುಪಾತದಲ್ಲಿ ನಿಗದಿ ಪಡಿಸಿದ ಶೈಕ್ಷಣಿಕ ಪರೀಕ್ಷೆಗಳ ಅಂಕಗಳ ಒಟ್ಟು ಸರಾಸರಿ ಆಧಾರದ ಮೇಲೆ ಮೆರಿಟ್ ವೈಸ್ (**Merit wise**) ಸಂದರ್ಶನಕ್ಕೆ ಕರೆಯಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಸಂದರ್ಶನಕ್ಕೆ ಹಾಜರಾಗಬೇಕು ಹಾಗೂ ಸಂದರ್ಶನ ಪತ್ರ ಅಥವಾ **SMS** ಮತ್ತು **E-mail** ಬರದೇ ಇರುವ ಅಭ್ಯರ್ಥಿಗಳು ಸಂದರ್ಶನಕ್ಕೆ ಅನರ್ಹರೆಂದು ಭಾವಿಸತಕ್ಕದ್ದು.

3) ಸಿಪಾಯಿ ಹುದ್ದೆಗೆ 1 : 10 ರ ಅನುಪಾತದಲ್ಲಿ ನಿಗದಿ ಪಡಿಸಿದ ಶೈಕ್ಷಣಿಕ ಪರೀಕ್ಷೆಗಳ ಅಂಕಗಳ ಒಟ್ಟು ಸರಾಸರಿ ಆಧಾರದ ಮೇಲೆ ಮೆರಿಟ್ ವೈಸ್ (**Merit wise**) ಸಂದರ್ಶನಕ್ಕೆ ಕರೆಯಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಸಂದರ್ಶನಕ್ಕೆ ಹಾಜರಾಗಬೇಕು ಹಾಗೂ ಸಂದರ್ಶನ ಪತ್ರ ಅಥವಾ **SMS** ಮತ್ತು **E-mail** ಬರದೇ ಇರುವ ಅಭ್ಯರ್ಥಿಗಳು ಸಂದರ್ಶನಕ್ಕೆ ಅನರ್ಹರೆಂದು ಭಾವಿಸತಕ್ಕದ್ದು.

4) ಆಯ್ಕೆಯ ಸಂಬಂಧವಾಗಿ ಸಂದರ್ಶನಕ್ಕೆ ಅನರ್ಹರಾದ ಅಭ್ಯರ್ಥಿಗಳು ಈ ಕಛೇರಿಯೊಂದಿಗೆ ಯಾವುದೇ ಪತ್ರ ವ್ಯವಹಾರವಾಗಲಿ, ಇಮೇಲ್ ಆಗಲಿ, ಖುದ್ದಾಗಿ ಬರುವುದಾಗಲಿ ಅಥವಾ ದೂರವಾಣಿ ಕರೆಗಳನ್ನು ನಡೆಸಲು/ಮಾಡಲು ಅವಕಾಶವಿರುವುದಿಲ್ಲ.

5) ಅಂಗವಿಕಲ ಹುದ್ದೆಗಳನ್ನು ಭರ್ತಿಮಾಡುವಾಗ ನಿರ್ದಿಷ್ಟಪಡಿಸಿದ ಅಂಗವಿಕಲ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಆ ನೇಮಕಾತಿಯನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 235 ಸೇನೆನಿ 2012, ಬೆಂಗಳೂರು, ದಿನಾಂಕಃ 22.11.2016 ರ ಪ್ರಕಾರ ಆಯ್ಕೆ ಮಾಡಲಾಗುವುದು.

6) ಮಾಹಿತಿಯನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡು ಆನ್‌ಲೈನ್ ಅರ್ಜಿಯಲ್ಲಿಯ ಎಲ್ಲ ಅಂಕಣಗಳನ್ನು ನಿಗದಿತ ಉತ್ತರಗಳಿಂದ ಭರ್ತಿ ಮಾಡಿ, ಅಭ್ಯರ್ಥಿಯ ಭಾವಚಿತ್ರ ಹಾಗೂ ಸಹಿಯೊಂದಿಗೆ ಅಪಲೋಡ ಮಾಡತಕ್ಕದ್ದು, ಸರಿಯಾಗಿ ಕಾಲಂಗಳನ್ನು (ಅಂಕಣಗಳನ್ನು) ಭರ್ತಿ ಮಾಡದೇ, ಅಭ್ಯರ್ಥಿಯ ಭಾವಚಿತ್ರ ಹಾಗೂ ಸಹಿ ಇರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

7) ಈ ಅಧಿಸೂಚನೆಯ ಎಲ್ಲಾ ಪ್ರಕ್ರಿಯೆಗಳನ್ನು ಕಾಲ-ಕಾಲಕ್ಕೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಳಗಾವಿಯ ಅಧಿಕೃತ ವೆಬ್-ಸೈಟ್ ಮತ್ತು ಸೂಚನಾ ಫಲಕದ (**Notice Board**) ಮೇಲೆ ಪ್ರಕಟಿಸಲಾಗುವುದು.

(ಮುಸ್ತಫಾ ಹುಸೇನ ಎಸ್.ಎ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಳಗಾವಿ.

ಪ್ರತಿಯನ್ನು ವಿಲೇಖನಾಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರಿಗೆ ಪ್ರತ್ಯೇಕ ಪತ್ರದೊಂದಿಗೆ ಸಲ್ಲಿಸಲಾಗಿದೆ.

...12.